Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**
ವಿಶೇಷ ಸಂಚಿಕೆ

भाग–IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली सोमवार, आगष्ट 5, 1985 | श्रावण 14, 1907 (शक) | खण्ड–3 |
| No. 1 | New Delhi Monday, August 5, 1985 | Shravana 14, 1907 (Saka) | Vol. 3 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಆಗಸ್ಟ್ ೫, ೧೯೮೫ | ಶ್ರಾವಣ ೧೪, ೧೯೦೭ (ಶಕ) | ಸಂಪುಟ ೩ |

## MINISTRY OF LAW, AND JUSTICE
(Legislative Department)

New Delhi, May 22, 1985/ Jaistha 1907 (Sakha)

The translations in Kannada of the following namely.—(1) The Fatal Accidents Act, 1855 (2) The Converts Marriage Dissolution Act, 1866 (3) The Indian Easement Act, 1882 (4) The Agriculturists' Loans Act, 1884 (5) The Indian Reserve Forces Act, 1888 (6) The Prevention of Seditious Meetings Act, 1911 (7) The Hindu Disposition of property Act, 1916 (8) The Mica Mines Labour Welfare Fund Act, 1946 (9) The Delivery of Books and Newspapers (Public Libraries) Act, 1954 (10) The Meternity Benefit Act, 1961 (11) The Motor Transports Workers Act, 1961 (12) The Public Provident Fund Act, 1968 and (13) The Authorised Translations (Central Laws) Act, 1973–are hereby published under the authority of the president and shall be deemed to be the authorised translations thereof in Kannada under clause (a) of Section 2 of the authorised Translations (central laws) Act, 1973 (50 of 1973).

ಕೆಳಕಂಡ ಕೇಂದ್ರ ಅಧಿನಿಯಮಂಗಳ ಎಂದರೆ, (೧) ಪ್ರಾಣಾಂತಿಕ ದುರ್ಘಟನಾ ಅಧಿನಿಯಮ, ೧೮೫೫; (೨) ಮತಾಂತರಿತರ ವಿವಾಹ ವಿಘಟನಾ ಅಧಿನಿಯಮ, ೧೮೬೬; (೩) ಭಾರತ ಅನುಭೋಗ ಅಧಿನಿಯಮ, ೧೮೮೨; (೪) ಬೇಸಾಯಗಾರ ಸಾಲ ಅಧಿನಿಯಮ ೧೮೮೪; (೫) ಭಾರತೀಯ ಮೀಸಲು ದಳ ಅಧಿನಿಯಮ, ೧೮೮೮; (೬) ರಾಜದ್ರೋಹಾತ್ಮಕ ಸಭಾ ಪ್ರತಿಬಂಧಕ ಅಧಿನಿಯಮ, ೧೯೧೧; (೭) ಹಿಂದೂ ಸ್ವತ್ತಿನ ವಿಲೆ ಅಧಿನಿಯಮ, ೧೯೧೬; (೮) ಅಭ್ರಕ ಗಣಿಗಳ ಕಾರ್ಮಿಕರ ಕಲ್ಯಾಣ ನಿಧಿ ಅಧಿನಿಯಮ, ೧೯೪೬; (೯) ಪುಸ್ತಕ ಮತ್ತು ವೃತ್ತಪತ್ರಿಕೆ (ಸಾರ್ವಜನಿಕ ಗ್ರಂಥಾಲಯಂಗಳಿಗೆ) ಒಪ್ಪಿಸುವ ಅಧಿನಿಯಮ, ೧೯೫೪; (೧೦) ಪ್ರಸೂತಿ ಸೌಕರ್ಯ ಅಧಿನಿಯಮ, ೧೯೬೧; (೧೧) ಮೋಟಾರು ಸಾರಿಗೆ ಕೆಲಸಗಾರರ ಅಧಿನಿಯಮ, ೧೯೬೧; (೧೨) ಸಾರ್ವಜನಿಕ ಭವಿಷ್ಯ ನಿಧಿ ಅಧಿನಿಯಮ, ೧೯೬೮; ಮತ್ತು (೧೩) (ಕೇಂದ್ರ ಕಾನೂನು) ಅಧಿಕೃತ ಭಾಷಾಂತರ ಅಧಿನಿಯಮ, ೧೯೭೩.—ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ (ಕೇಂದ್ರ ಕಾನೂನುಗಳ) ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಂಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

10 + 13 = 23

# ರಾಜದ್ರೋಹಾತ್ಮಕ ಸಭಾ ಪ್ರತಿಬಂಧಕ ಅಧಿನಿಯಮ, 1911

(1911ರ ಅಧಿನಿಯಮ ಸಂಖ್ಯೆ 10)

[ ಮೇ 1, 1984 ರಂದು ಜಾರಿಯಲ್ಲಿದ್ದಂತೆ ] [ಮಾರ್ಚ್ 22, 1911]

ರಾಜದ್ರೋಹವನ್ನು ಉತ್ತೇಜಿಸುವ ಅಥವಾ ಸಾರ್ವಜನಿಕ ನೆಮ್ಮದಿಯನ್ನು ಕದಡುವ ಸಂಭವವಿರುವ ಸಾರ್ವಜನಿಕ ಸಭೆಗಳನ್ನು ಪ್ರತಿಬಂಧಿಸುವುದಕ್ಕೆ ಸಂಬಂಧಿಸಿದ ಕಾನೂನನ್ನು ಒಟ್ಟುಗೂಡಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ರಾಜದ್ರೋಹವನ್ನು ಉತ್ತೇಜಿಸುವ ಅಥವಾ ಸಾರ್ವಜನಿಕ ನೆಮ್ಮದಿಯನ್ನು ಕದಡುವ ಸಂಭವವಿರುವ ಸಾರ್ವಜನಿಕ ಸಭೆಗಳನ್ನು ಪ್ರತಿಬಂಧಿಸುವುದಕ್ಕೆ ಸಂಬಂಧಿಸಿದ ಕಾನೂನನ್ನು ಒಟ್ಟುಗೂಡಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ, ಅವನ್ನು ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:—

1. ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ.— (1) ಈ ಅಧಿನಿಯಮವನ್ನು ರಾಜದ್ರೋಹಾತ್ಮಕ ಸಭಾ ಪ್ರತಿಬಂಧಕ ಅಧಿನಿಯಮ, 1911 ಎಂದು ಕರೆಯತಕ್ಕದ್ದು.

(2) ಇದು, 1956ರ ನವೆಂಬರ್ 1ನೇ ದಿನಾಂಕಕ್ಕೆ ನಿಕಟಪೂರ್ವದಲ್ಲಿ 'ಖ' ಭಾಗದ ರಾಜ್ಯಗಳಲ್ಲಿ ಅಡಕವಾಗಿದ್ದ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ, ಆದರೆ ರಾಜ್ಯಸರ್ಕಾರವು ಕಾಲಕಾಲಕ್ಕೆ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸಬಹುದಾದಂಥ ರಾಜ್ಯಗಳಲ್ಲಿ ಅಥವಾ ರಾಜ್ಯಗಳ ಭಾಗಗಳಲ್ಲಿ ಮಾತ್ರ ಜಾರಿಯಲ್ಲಿರತಕ್ಕದ್ದು.

2. ಉದ್ಘೋಷಿತ ಪ್ರದೇಶಗಳನ್ನು ಅಧಿಸೂಚಿಸಲು ರಾಜ್ಯಸರ್ಕಾರಕ್ಕಿರುವ ಅಧಿಕಾರ.—(1) ಈ ಅಧಿನಿಯಮವು ತತ್ಕಾಲದಲ್ಲಿ ಜಾರಿಯಲ್ಲಿರುವ ಇಡೀ ಪ್ರಾಂತವನ್ನು ಅಥವಾ ಅದರ ಯಾವುದೇ ಭಾಗವನ್ನು ಉದ್ಘೋಷಿತ ಪ್ರದೇಶವೆಂದು ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಘೋಷಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಅಧಿಸೂಚನೆಯು, ಆರು ತಿಂಗಳಿಗಿಂತ ಹೆಚ್ಚು ಕಾಲ ಜಾರಿಯಲ್ಲಿರತಕ್ಕದ್ದಲ್ಲ; ಆದರೆ ರಾಜ್ಯಸರ್ಕಾರವು ಅದೇ ಪ್ರದೇಶದಲ್ಲಿ ತಾನು ಸೂಕ್ತವೆಂದು ಆಲೋಚಿಸಬಹುದಾದಂಥ ಯಾವುದೇ ಹೆಚ್ಚಿನ ಅಧಿಸೂಚನೆಗಳನ್ನು ಕಾಲಕಾಲಕ್ಕೆ ಮಾಡುವುದನ್ನು ಈ ಉಪಪ್ರಕರಣದಲ್ಲಿರುವುದು ಯಾವುದೂ ಪ್ರತಿಬಂಧಿಸುವುದೆಂದು ಭಾವಿಸತಕ್ಕದ್ದಲ್ಲ;

3. ಪರಿಭಾಷೆ:—(1) ಈ ಅಧಿನಿಯಮದಲ್ಲಿ, 'ಸಾರ್ವಜನಿಕ ಸಭೆ, ಎಂಬ ಪದಾವಳಿಗೆ, ಸಾರ್ವಜನಿಕರಿಗೆ ಅಥವಾ ಸಾರ್ವಜನಿಕರ ಯಾವುದೇ ವರ್ಗಕ್ಕೆ ಅಥವಾ ಭಾಗಕ್ಕೆ ಪ್ರವೇಶವಿರುವ ಸಭೆ ಎಂದು ಅರ್ಥ.

(2) ಒಂದು ಸಭೆಯು ಖಾಸಗಿ ಸ್ಥಳದಲ್ಲಿ ನಡೆದಾಗ್ಗೂ ಮತ್ತು ಅದರ ಪ್ರವೇಶವನ್ನು ಟಿಕೆಟ್ ಮೂಲಕ ಅಥವಾ ಅನ್ಯಥಾ ನಿರ್ಬಂಧಿಸಿದಾಗ್ಗೂ ಅದು ಸಾರ್ವಜನಿಕ ಸಭೆಯಾಗಿರಬಹುದು.

4. ಸಾರ್ವಜನಿಕ ಸಭೆಗಳ ಬಗ್ಗೆ ನೋಟೀಸು ಕೊಡತಕ್ಕದ್ದು:—(1) ಗಲಭೆಯನ್ನು ಅಥವಾ ಸಾರ್ವಜನಿಕ ಉದ್ರೇಕವನ್ನು ಉಂಟು ಮಾಡುವ ಸಂಭವವಿರುವ ಯಾವುದೇ ವಿಷಯವನ್ನು ಮುಂದುವರಿಸುವುದಕ್ಕಾಗಿ ಅಥವಾ ಚರ್ಚಿಸುವುದಕ್ಕಾಗಿ ಅಥವಾ ಅಂಥ ಯಾವುದೇ ವಿಷಯಕ್ಕೆ ಸಂಬಂಧಿಸಿದ ಯಾವುದೇ ಬರಹವನ್ನು ಅಥವಾ ಮುದ್ರಿತ ವಿಷಯವನ್ನು ಪ್ರದರ್ಶಿಸುವುದಕ್ಕಾಗಿ ಅಥವಾ ಹಂಚುವುದಕ್ಕಾಗಿ ಯಾವುದೇ ಸಾರ್ವಜನಿಕ ಸಭೆಯನ್ನು—

(ಕ) ಅಂಥ ಸಭೆಯನ್ನು ನಡೆಸುವ ಉದ್ದೇಶದ ಬಗ್ಗೆ ಮತ್ತು ಅಂಥ ಸಭೆಯ ಕಾಲ ಹಾಗು ಸ್ಥಳದ ಬಗ್ಗೆ ಕೊನೆಯ ಪಕ್ಷ ಮೂರು ದಿನಗಳ ಮುಂಚಿತವಾಗಿ, ಸಂದರ್ಭಾನುಸಾರ, ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅಥವಾ ಪೊಲೀಸ್ ಕಮೀಷನರನಿಗೆ ಲಿಖಿತ ನೋಟೀಸ್‌ನ್ನು ಕೊಟ್ಟಿದ್ದ ಹೊರತು, ಅಥವಾ

(ಖ) ಅಂಥ ಸಭೆಯನ್ನು ನಡೆಸುವ ಬಗ್ಗೆ, ಸಂದರ್ಭಾನುಸಾರ, ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಅಥವಾ ಪೊಲೀಸ್ ಕಮೀಷನರಿಂದ ಲಿಖಿತ ಅನುಮತಿಯನ್ನು ಪಡೆದಿದ್ದ ಹೊರತು,

—ಯಾವುದೇ ಉದ್ಘೋಷಿತಪ್ರದೇಶದಲ್ಲಿ ನಡೆಸತಕ್ಕದ್ದಲ್ಲ.

(2) ವರದಿಯನ್ನು ತೆಗೆದುಕೊಳ್ಳುವಂತೆ ಮಾಡಲು ಮ್ಯಾಜಿಸ್ಟ್ರೇಟನ ಅಧಿಕಾರ.— ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಈ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಅಧಿಕೃತನಾದ ಯಾವನೇ ಮೊದಲ ದರ್ಜೆಯಮ್ಯಾಜಿಸ್ಟ್ರೇಟನು, ವ್ಯವಹರಣೆಗಳ ವರದಿಯನ್ನು ತೆಗೆದುಕೊಳ್ಳುವಂತೆ ಮಾಡುವ ಉದ್ದೇಶಕ್ಕಾಗಿ ಅಂಥ ಸಭೆಗೆ ಹಾಜರಾಗಲು ಹೆಡ್‌ಕಾನ್‌ಸ್ಟೇಬಲ್‌ನ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಅಥವಾ ಹೆಚ್ಚು ಪೊಲೀಸ್ ಅಧಿಕಾರಿಗಳನ್ನು ಅಥವಾ ಇತರ ವ್ಯಕ್ತಿಗಳನ್ನು, ಲಿಖಿತ ಆದೇಶದ ಮೂಲಕ ನಿಯೋಗಿಸಬಹುದು.

(3) ಅಪವಾದ.— ಈ ಪ್ರಕರಣದಲ್ಲಿರುವುದು ಯಾವುದೂ, ಯಾವುದೇ ಶಾಸನಬದ್ಧ ಅಥವಾ ಇತರ ವ್ಯಕ್ತ ಕಾನೂನು ಪ್ರಾಧಿಕಾರದ ಮೇರೆಗೆ ನಡೆಯುವ ಯಾವುದೇ ಸಾರ್ವಜನಿಕ ಸಭೆಗೆ ಅಥವಾ ಷರೀಫನು ಏರ್ಪಡಿಸಬಹುದಾದ ಸಾರ್ವಜನಿಕ ಸಭೆಗಳಿಗೆ ಅಥವಾ ರಾಜ್ಯಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಆ ಉದ್ದೇಶಕ್ಕಾಗಿ ವಿನಾಯಿತಿ ಕೊಟ್ಟಿರುವ ಯಾವುವೇ ಸಾರ್ವಜನಿಕ ಸಭೆಗಳಿಗೆ ಅಥವಾ ಸಾರ್ವಜನಿಕ ಸಭೆಗಳ ವರ್ಗಕ್ಕೆ ಅನ್ವಯಿಸತಕ್ಕದ್ದಲ್ಲ.

5. ಸಾರ್ವಜನಿಕ ಸಭೆಗಳನ್ನು ನಿಷೇಧಿಸುವ ಅಧಿಕಾರ.— ಸಂದರ್ಭಾನುಸಾರ, ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಪೊಲೀಸ್ ಕಮೀಷರನು ಯಾವುದರ ಬಗ್ಗೆ ಸಾರ್ವಜನಿಕ ನೋಟೀಸನ್ನು ಕೊಡಲೇ ಕೊಡತಕ್ಕದ್ದೋ ಆ ಲಿಖಿತ ಆದೇಶದ ಮೂಲಕ, ಯಾವುದೇ ಕಾಲದಲ್ಲಿ, ಅಂಥ ಸಭೆಯು ರಾಜ ದ್ರೋಹವನ್ನು ಅಥವಾ ಅವಿಶ್ವಾಸವನ್ನು ಉತ್ತೇಜಿಸುವ ಅಥವಾ ಸಾರ್ವಜನಿಕ ಗಲಭೆಯನ್ನು ಉಂಟುಮಾಡುವ ಸಂಭವವಿದೆಯೆಂದು ಅವನು ಅಭಿಪ್ರಾಯಪಟ್ಟರೆ, ಉದ್ಘೋಷಿತ ಪ್ರದೇಶದಲ್ಲಿ ಯಾವುದೇ ಸಾರ್ವಜನಿಕ ಸಭೆಯನ್ನು ನಿಷೇಧಿಸಬಹುದು.

6. ದಂಡಗಳು.— (1) 4ನೇ ಪ್ರಕರಣದ ಉಪಬಂಧಗಳಿಗೆ ವಿರುದ್ಧವಾಗಿ ಉದ್ಘೋಷಿತ ಪ್ರದೇಶದಲ್ಲಿ ಸಾರ್ವಜನಿಕ ಸಭೆಯನ್ನು ವ್ಯವಸ್ಥೆ ಮಾಡುವುದಕ್ಕೆ ಅಥವಾ ನಡೆಸುವುದಕ್ಕೆ ಸಂಬಂಧಿಸಿದ ಯಾವನೇ ವ್ಯಕ್ತಿಯು ಆರು ತಿಂಗಳುಗಳ ವರೆಗಿನ ಕಾರವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದ ದಂಡಿತನಾಗತಕ್ಕದ್ದು.

(2) 5ನೇ ಪ್ರಕರಣದ ಮೇರೆಗೆ ನಿಷೇಧಿತವಾಗಿರುವ ಯಾವುದೇ ಸಾರ್ವಜನಿಕ ಸಭೆಯನ್ನು ಭಾರತ ದಂಡ ಸಂಹಿತೆಯ (1860ರ 45ರ) VIIIನೇ ಅಧ್ಯಾಯದ ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1898(1898ರ V)ರ IX ನೇ ಅಧ್ಯಾಯದ ಅರ್ಥವ್ಯಾಪ್ತಿಯಲ್ಲಿ ಕಾನೂನು ವಿರುದ್ಧವಾದ ಕೂಟವೆಂದು ಭಾವಿಸತಕ್ಕದ್ದು.

7. ಸಾರ್ವಜನಿಕ ಸ್ಥಳಗಳಲ್ಲಿ ಭಾಷಣಗಳನ್ನು ಮಾಡುವ ಬಗ್ಗೆ ದಂಡ.— ಸಂದರ್ಭಾನುಸಾರ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಅಥವಾ ಪೋಲಿಸ್ ಕಮಿಷನರನಿಂದ ಮುಂಚಿತವಾಗಿ ಪಡೆದ ಲಿಖಿತ ಅನುಮತಿಯಿಲ್ಲದೆ, 4ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾದ ಅಥವಾ ಅದರಿಂದ ವಿನಾಯಿತಿ ಪಡೆದ ಸಾರ್ವಜನಿಕ ಸಭೆಯಲ್ಲಲ್ಲದೆ ಇತರ ಉದ್ಘೋಷಿತ ಪ್ರದೇಶದಲ್ಲಿ, ಸಾರ್ವಜನಿಕ ಸ್ಥಳದಲ್ಲಿ ಅಥವಾ ಸಾರ್ವಜನಿಕರು ಸೇರುವ ಸ್ಥಳದಲ್ಲಿ ಗಲಭೆಯನ್ನು ಅಥವಾ ಸಾರ್ವಜನಿಕ ಉದ್ರೇಕವನ್ನುಂಟು ಮಾಡಬಹುದಾದಂಥ ಯಾವುದೇ ವಿಷಯದ ಮೇಲೆ ಆಗ ಹಾಜರಿರುವ ವ್ಯಕ್ತಿಗಳಿಗೆ ಯಾವುದೇ ಉಪನ್ಯಾಸವನ್ನು ಮಾಡುವ ಅಥವಾ ಉದ್ದೇಶಿಸಿ ಮಾತನಾಡುವ ಅಥವಾ ಭಾಷಣ ಮಾಡುವ ಯಾವನೇ ವ್ಯಕ್ತಿಯನ್ನು ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು ಮತ್ತು ಆರು ತಿಂಗಳವರೆಗಿನ ಕಾರವಾಸದಿಂದ, ಅಥವಾ ಜುಲ್ಮಾನೆಯಿಂದ ಅಥವಾ, ಅವೆರಡರಿಂದ ಅವನು ದಂಡಿತನಾಗತಕ್ಕದ್ದು.

8. ಅಪರಾಧಗಳ ಸಂಜ್ಞಾನ.— ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನ ಅಥವಾ ಮೊದಲ ದರ್ಜೆ ಮ್ಯಾಜಿಸ್ಟ್ರೇಟನ ಅಥವಾ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕೆ ಕಡಿಮೆಯಲ್ಲದ ಯಾವುದೇ ನ್ಯಾಯಾಲಯವು ಈ ಅಧಿನಿಯಮಕ್ಕೆ ವಿರುದ್ಧವಾದ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

9. [ನಿರಸಿತ]

The above translation in Kannada of the Prevention of Seditious Meetings Act, 1911 (Act No. 10 of 1911) has been authorised by the President to be published in Official Gazette under Clause (a) Section 2 of the Authorised Translations (Central Laws) Act, 1973.

R. V. S Peri Sastry,
*Secretary to the Government of India.*

**WD 4160**